ಪ್ರಕೃತಿ ಚಿಕಿತ್ಸೆ ಪದ್ಧತಿಗೆ ಪ್ರತ್ಯೇಕ ಮಂಡಳಿ ಸ್ಥಾಪನೆ

1157 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆಂಧ್ರ ಪ್ರದೇಶದಲ್ಲಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಪದ್ಧತಿಯನ್ನು ಆಯುರ್ವೇದದಿಂದ ಬಿಡುಗಡೆಗೊಳಿಸಿ ಪ್ರತ್ಯೇಕ ಪರಿಷತ್ತು ಸ್ಥಾಪಿಸಿದಂತೆ ಕರ್ನಾಟಕದಲ್ಲಿ ಸ್ಥಾಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?*

ಆ) *ಬೆಂಗಳೂರು ಮಹಾನಗರದಲ್ಲಿ ಆಯುರ್ವೇದ ಯುನಾನಿ, ಮತ್ತು ಸಿದ್ದಪದ್ಧತಿಯ ಆಸ್ಪತ್ರೆಗಳಿದ್ದರೂ ಪ್ರಕೃತಿ ಚಿಕಿತ್ಸೆ ಆಸ್ಪತ್ರೆ ಇನ್ನೂ ಏಕೆ ಪ್ರಾರಂಭಿಸಿಲ್ಲದಿರಲು ಕಾರಣಗಳೇನು?*

ಇ) *ಪ್ರತಿ ವರ್ಷ ಎಷ್ಟಷ್ಟು ಆಯುರ್ವೇದ ಯುನಾನಿ ಹೋಮಿಯೋಪತಿ ಮತ್ತು ಪ್ರಕೃತಿ ಚಿಕಿತ್ಸೆ ಆಸ್ಪತ್ರೆಗಳನ್ನು ತೆರೆಯಲಾಗುತ್ತಿದೆ?*

ಈ) *ಪ್ರಕೃತಿ ಚಿಕಿತ್ಸಾ ಕೇಂದ್ರಗಳು ಪ್ರಕೃತಿ ಚಿಕಿತ್ಸಾ ವೈದ್ಯಲಿಲ್ಲದ ಉಪಕರಣಗಳಿಲ್ಲದೆ ನಡೆಯುತ್ತಿರುವುದು ಸರ್ಕಾರ ಗಮನಿಸಿದೆಯೆ? ಹಾಗಿದ್ದಲ್ಲಿ ಕೈಗೊಂಡ ಕ್ರಮಗಳೇನು?*

ಉ) *ಪ್ರಕೃತಿ ಚಿಕಿತ್ಸಾಲಯಗಳಿಗೆ ಪ್ರಕೃತಿ ಚಿಕಿತ್ಸೆಯನ್ನು ಮಾತ್ರ ಓದಿ ತಜ್ಞತೆ ಪಡೆದ ವೈದ್ಯರನ್ನು ನೇಮಿಸಲು ಸರ್ಕಾರಕ್ಕಿರುವ ತೊಂದರೆ ಏನು?*

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು) :

ಅ) ಇಲ್ಲ

ಆ) ಬೆಂಗಳೂರಿನಲ್ಲಿ ಪ್ರಕೃತಿ ಚಿಕಿತ್ಸೆ ಆಸ್ಪತ್ರೆಯನ್ನು ಎಂಟನೇ ಯೋಜನೆಯ ಅವಧಿಯಲ್ಲಿ ಪರಿಶೀಲಿಸಲಾಗುವುದು.

ಇ) ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಕೆಳಕಂಡ ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪತಿ ಸಂಸ್ಥೆಗಳನ್ನು ತೆರೆಯಲಾಗಿದೆ.

1. 1985-86 ರಲ್ಲಿ ಬೆಂಗಳೂರಿನಲ್ಲಿ ಒಂದು ಸರ್ಕಾರಿ ಹೋಮಿಯೋಪತಿ ಮಹಾವಿದ್ಯಾಲಯ.

2. 1986-87 ರಲ್ಲಿ ಮೈಸೂರಿನಲ್ಲಿ ಒಂದು ಆರು ಹಾಸಿಗೆಗಳ ಪ್ರಕೃತಿ ಚಿಕಿತ್ಸೆ ಆಸ್ಪತ್ರೆ.

3. 1988-89 ರಲ್ಲಿ ತೊಣಸಿನಹಳ್ಳಿ, ಚಿತ್ತಾಪುರ ತಾಲ್ಲೂಕು ಇಲ್ಲಿ ಒಂದು ಆಯುರ್ವೇದದ ಔಷಧಾಲಯ.

ಈ) ಹಾಲಿ ಪ್ರಕೃತಿ ಚಿಕಿತ್ಸೆ ವೈದ್ಯರು ದರ್ಜೆ -3 ಹುದ್ದೆಗಳು ಎರಡು ಖಾಲಿ ಇದ್ದು ಈ ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕಸೇವಾ ಆಯೋಗವು ಜಾಹಿರಾತು ಕಳುಹಿಸಿದೆ. ಇಲ್ಲಿಂದ ಆಯ್ಕೆ ಪಟ್ಟಿ ಬಂದ ತಕ್ಷಣವೇ ಈ ಹುದ್ದೆಗಳನ್ನು ತುಂಬಲಾಗುವುದು. ಪ್ರಕೃತಿ ಚಿಕಿತ್ಸಾಲಯಗಳು ಜಿಲ್ಲಾ ಪರಿಷತ್ತುಗಳ ಆಡಳಿತ ವ್ಯಾಪ್ತಿಯಲ್ಲಿ ಬರುತ್ತಿದ್ದು, ಜಿಲ್ಲಾ ಪರಿಷತ್ತುಗಳೇ ಬೇಕಾಗುವ ಉಪಕರಣಗಳನ್ನು ಒದಗಿಸಬೇಕಾಗುತ್ತದೆ.

ಉ) ನೇಮಕಾತಿ ನಿಯಮಗಳ ಪ್ರಕಾರ ವೈದ್ಯರನ್ನು ನೇಮಕಾತಿ ಮಾಡಲಾಗುತ್ತಿದೆ.